**All India Radio: Bangalore**
**National Bulletin In Kannada**
**31.08.2025  7.35am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**31.08.2025  7.35am**

**<><><><>**

ಮುಖ್ಯಾಂಶಗಳು

೧. ಟಿಯಾಂಜಿನ್‌ನಲ್ಲಿ ಇಂದಿನಿಂದ ಎಸ್‌ಸಿಒ ಶೃಂಗಸಭೆ ಆರಂಭ; ಪ್ರಧಾನಿ ನರೇಂದ್ರ ಮೋದಿ ಪ್ರಮುಖ ಅತಿಥಿಯಾಗಿ ಭಾಗಿ

೨. ಪ್ರಧಾನಮಂತ್ರಿ ನರೇಂದ್ರ ಮೋದಿ - ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್ಸ್ಕಿ ನಡುವೆ ದೂರವಾಣಿ ಸಂಭಾಷಣೆ; ಇತ್ತೀಚಿನ ಬೆಳವಣಿಗೆಗಳ ಕುರಿತು ಸಮಾಲೋಚನೆ

೩. ಮನ್ ಕಿ ಬಾತ್ ನ ೧೨೫ನೇ ಸಂಚಿಕೆಯಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಪ್ರಧಾನಿ ಭಾಷಣ

೪. ಗೋವಾದಲ್ಲಿ ನಡೆಯುತ್ತಿರುವ ೫ ನೇ ಆಸಿಯಾನ್-ಭಾರತ ಯುವ ಶೃಂಗಸಭೆಗೆ ಇಂದು ತೆರೆ

೫. ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಇತಿಹಾಸ; ೫೦ ಚಿನ್ನದ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿ

><><><><><><><><><

ಇಂದಿನಿಂದ ಆರಂಭವಾಗಲಿರುವ ೨೫ನೇ ಶಾಂಘೈ ಸಹಕಾರ ಸಂಸ್ಥೆ ಎಸ್‌ಸಿಒ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿ ನಿನ್ನೆ ಚೀನಾದ ಟಿಯಾಂಜಿನ್ ತಲುಪಿದ್ದಾರೆ. ಎರಡು ದಿನಗಳ ಕಾಲ ನಡೆಯಲಿರುವ ಈ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಜಾಗತಿಕ ನಾಯಕರೊಂದಿಗೆ ಪಾಲ್ಗೊಳ್ಳಲಿದ್ದಾರೆ. ಈ ವರ್ಷ, ಚೀನಾ, ಐದನೇ ಬಾರಿ ಎಸ್‌ಸಿಒ ಶೃಂಗಸಭೆಯ ಆತಿಥ್ಯ ವಹಿಸುತ್ತಿದ್ದು, ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ. ೨೦ಕ್ಕೂ

ಹೆಚ್ಚು ರಾಷ್ಟ್ರಗಳ ಮುಖ್ಯಸ್ಥರು ಹಾಗೂ ೧೦ ಅಂತರರಾಷ್ಟ್ರೀಯ ಸಂಸ್ಥೆಗಳ ನಾಯಕರು ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪ್ರಮುಖ ಅತಿಥಿಗಳಾಗಿ ಈ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. ಟಿಯಾಂಜಿನ್‌ಗೆ ಬಂದಿಳಿದ ಪ್ರಧಾನಿ ಅವರಿಗೆ ಅಲ್ಲಿನ ಭಾರತೀಯ ಸಮುದಾಯದ ಸದಸ್ಯರು ಆದರದ ಸ್ವಾಗತ ಕೋರಿದರು. ಈ ಸಂದರ್ಭದಲ್ಲಿ, ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ತರಬೇತಿ ಪಡೆದಿರುವ ಚೀನಾದ ಮಹಿಳಾ ಕಲಾವಿದರು, ಸೀತಾರ್, ಸಂತೂರ್ ಮತ್ತು ತಬಲಾ ಮೂಲಕ "ವಂದೇ ಮಾತರಂ" ಪ್ರಸ್ತುತಪಡಿಸಿದರು. ಇದರ ಜೊತೆಗೆ ಚೀನಾದ ನೃತ್ಯ ಕಲಾವಿದರು ಭರತನಾಟ್ಯ, ಓಡಿಸ್ಸಿ ಮತ್ತು ಕಥಕ್ ನೃತ್ಯ ಪ್ರದರ್ಶನಗಳನ್ನು ನೀಡಿದರು, ಈ ಬಾರಿಯ ಶೃಂಗಸಭೆಯಲ್ಲಿ ಪ್ರಾದೇಶಿಕ ಭದ್ರತೆ, ಸಂಪರ್ಕ ವ್ಯವಸ್ಥೆ, ಸುಸ್ಥಿರ ಅಭಿವೃದ್ಧಿ ಮತ್ತು ಜಾಗತಿಕ ಸಹಕಾರದಂತಹ ಪ್ರಮುಖ ವಿಷಯಗಳ ಬಗ್ಗೆ ಚರ್ಚೆಗಳು ನಡೆಯಲಿದ್ದು, ಸಂಸ್ಥೆಯ ೨೫ ವರ್ಷಗಳ ಸಾಧನೆಗಳ ವಿಮರ್ಶೆ ನಡೆಯಲಿದೆ. ಇದರ ಜೊತೆಗೆ ಮುಂದಿನ ೧೦ ವರ್ಷಗಳ ಅಭಿವೃದ್ಧಿಯ ಕಾರ್ಯತಂತ್ರಕ್ಕೂ ಅನುಮೋದನೆ ಸಿಗುವ ನಿರೀಕ್ಷೆಯಿದೆ.

><><><><><><><><><><

ಪ್ರಧಾನಮಂತ್ರಿ ನರೇಂದ್ರ ಮೋದಿ ನಿನ್ನೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್ಸ್ಕಿ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದರು. ಈ ವೇಳೆ, ಉಕ್ರೇನ್ ಅಧ್ಯಕ್ಷ ಜೆಲೆನ್ಸ್ಕಿ ತಮ್ಮ ದೇಶದ ಇತ್ತೀಚಿನ ಬೆಳವಣಿಗೆಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾಹಿತಿ ಹಂಚಿಕೊಂಡರು. ಪ್ರಧಾನಿ, ಅಧ್ಯಕ್ಷ ಜೆಲೆನ್ಸ್ಕಿ ಅವರಿಗೆ ಧನ್ಯವಾದ ಸಲ್ಲಿಸಿ, ಉಕ್ರೇನ್ ಸಂಘರ್ಷದ ಶಾಂತಿಯುತ ಪರಿಹಾರಕ್ಕಾಗಿ ಭಾರತದ ನಿರಂತರ ಮತ್ತು ಸ್ಥಿರ ನಿಲುವು ಹಾಗೂ ಶಾಂತಿ ಪುನಃಸ್ಥಾಪನೆಗಾಗಿ ಕೈಗೆತ್ತಿಕೊಳ್ಳಲಾಗುತ್ತಿರುವ ಪ್ರಯತ್ನಗಳಿಗೆ ಭಾರತ ನೀಡುತ್ತಿರುವ ಬೆಂಬಲವನ್ನು ಪುನರುಚ್ಚರಿಸಿದರು. ಈ ಸಂಬಂಧ ಭಾರತ ಸಹಾಯ ಮಾಡಲು ಬದ್ಧವಿರುವುದನ್ನೂ ಪ್ರಧಾನಿ ಸ್ಪಷ್ಟಪಡಿಸಿದರು. ಇದೆ ವೇಳೆ, ಉಭಯ ನಾಯಕರು ಭಾರತ-ಉಕ್ರೇನ್ ದ್ವಿಪಕ್ಷೀಯ ಸಹಕಾರದ ಪ್ರಗತಿಯನ್ನು ಪರಾಮರ್ಶಿಸಿ, ಪರಸ್ಪರ ಹಿತಾಸಕ್ತಿಯ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ವೃದ್ಧಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು. ಹಾಗೂ ಮುಂದಿನ ದಿನಗಳಲ್ಲೂ ಪರಸ್ಪರ ಸಂಪರ್ಕದಲ್ಲಿರಲು ಒಮ್ಮತ ವ್ಯಕ್ತಪಡಿಸಿದರು.

><><><><><><><><><><

ಆಕಾಶವಾಣಿಯ ಜನಪ್ರಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್' ನಲ್ಲಿ ಇಂದು ಬೆಳಗ್ಗೆ ೧೧ ಗಂಟೆಗೆ ಪ್ರಧಾನಿ ನರೇಂದ್ರ ಮೋದಿ, ದೇಶ-ವಿದೇಶಗಳಲ್ಲಿರುವ ಭಾರತೀಯ ಸಮುದಾಯದೊಂದಿಗೆ ತಮ್ಮ ಮನದಾಳದ ಮಾತುಗಳನ್ನು ಹಂಚಿಕೊಳ್ಳಲಿದ್ದಾರೆ. ಇದು 'ಮನ್ ಕಿ ಬಾತ್' ಕಾರ್ಯಕ್ರಮದ ೧೨೫ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲ ವಾಹಿನಿಗಳು, ಎಐಆರ್ ನ್ಯೂಸ್ ಜಾಲತಾಣ, ನ್ಯೂಸ್ ಆನ್ ಏರ್ ಮೊಬೈಲ್ ಆಪ್‌ನಲ್ಲಿ ಪ್ರಸಾರವಾಗಲಿದೆ.  ಹಿಂದಿ ಅವತರಣಿಕೆಯ ನಂತರ ಪ್ರಾದೇಶಿಕ ಭಾಷೆಗಳಲ್ಲಿ ಈ ಕಾರ್ಯಕ್ರಮವನ್ನು ಕೇಳಬಹುದಾಗಿದೆ.

><><><><><><><><><><

ವಿದೇಶಾಂಗ ಸಚಿವಾಲಯ, ಇಂಡಿಯಾ ಪ್ರತಿ?ನ ಮತ್ತು ಆಸಿಯಾನ್ ಪ್ರತಿ?ನದ ಸಹಯೋಗದೊಂದಿಗೆ ಆಯೋಜಿಸಲಾಗಿರುವ ೫ ನೇ ಆಸಿಯಾನ್-ಭಾರತ ಯುವ ಶೃಂಗಸಭೆಯ ಇಂದು ಸಮಾರೋಪಗೊಳ್ಳಲಿದೆ. "ಯುವಜನರನ್ನು ಸಂಪರ್ಕಿಸುವುದು: ನಮ್ಮ ಭವಿ?ವನ್ನು ರೂಪಿಸುವುದು" ಎಂಬುದು ಶೃಂಗಸಭೆಯ ಧ್ಯೇಯವಾಕ್ಯವಾಗಿದೆ. ಶೃಂಗಸಭೆಯ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಕೇಂದ್ರ ವಿದೇಶಾಂಗ ಮತ್ತು ಜವಳಿ ರಾಜ್ಯ ಸಚಿವ ಪಬಿತ್ರಾ ಮಾರ್ಗರಿಟಾ ಆಗಸ್ಟ್ ೨೮ ರಂದು ಮಾತನಾಡಿದ್ದರು. ೨೦೨೫ ಅನ್ನು ಆಸಿಯಾನ್-ಭಾರತ ಪ್ರವಾಸೋದ್ಯಮ ವ?ವೆಂದು ಘೋಷಿಸುವುದರೊಂದಿಗೆ, ಶೃಂಗಸಭೆಯ ಆಯೋಜನೆಗೆ ಗೋವಾ ಅನ್ನು ಆಯ್ಕೆ ಮಾಡಿರುವುದು ಸೂಕ್ತವಾಗಿ ಹೊಂದಾಣಿಕೆಯಾಗುತ್ತಿದೆ. ಭಾರತ, ಆಸಿಯಾನ್ ಸದಸ್ಯ ರಾ?ಗಳು ಮತ್ತು ಟಿಮೋರ್ ಲೆಸ್ಟೆಯನ್ನು ಪ್ರತಿನಿಧಿಸುವ ರಾಜಕೀಯ, ತಂತ್ರಜ್ಞಾನ, ಶೈಕ್ಷಣಿಕ, ಮಾಧ್ಯಮ ಮತ್ತು ಚಿಂತಕರ ಚಾವಡಿ ಸೇರಿದಂತೆ ವಿವಿಧ ವಲಯಗಳ ೧೦೦ಕ್ಕೂ ಹೆಚ್ಚು ಉದಯೋನ್ಮುಖ ನಾಯಕರು ಶೃಂಗಸಭೆಯಲ್ಲಿ ಭಾಗವಹಿಸಿದ್ದರು.

><><><><><><><><><><

ಪ್ರಸ್ತುತ ಕಾಲಮಾನದಲ್ಲಿ ಭಾರತೀಯ ಪಡೆಗಳು ವಿದೇಶಿ ಆಮದುಗಳ ಮೇಲೆ ಹೆಚ್ಚು ಅವಲಂಬಿತವಾಗಿರಲು ಸಾಧ್ಯವಿಲ್ಲ, ಆದ್ದರಿಂದ ಸೇನೆಯ ಉನ್ನತೀಕರಣಕ್ಕಾಗಿ ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ತಿಳಿಸಿದ್ದಾರೆ. ನೋಯಿಡಾದಲ್ಲಿ ನಿನ್ನೆ ಖಾಸಗಿ ವಿಮಾನ ಎಂಜಿನ್ ಪರೀಕ್ಷಾ ಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಮುಂದಿನ ಹತ್ತು ವರ್ಷಗಳಲ್ಲಿ ಪ್ರಸ್ತಾಪಿತ "ಸುದರ್ಶನ ಚಕ್ರ" ವಾಯು ಸಂರಕ್ಷಣಾ ವ್ಯವಸ್ಥೆ ಅಡಿಯಲ್ಲಿ ದೇಶದ ಎಲ್ಲ ಪ್ರಮುಖ ಸೌಕರ್ಯಗಳಿಗೆ ಸಂಪೂರ್ಣ ವಾಯುಭದ್ರತೆ ಒದಗಿಸಲಾಗುತ್ತದೆ ಎಂದು ತಿಳಿಸಿದರು.

><><><><><><><><><><

ಭಾರತ ಶೀಘ್ರದಲ್ಲೇ ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆಯಾಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ -ಆರ್‌ಬಿಐ ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ .ಈ ಬೆಳವಣಿಗೆಗೆ ಪ್ರಧಾನಮಂತ್ರಿ ಜನಧನ್ ಯೋಜನೆಯು ಮಹತ್ವಪೂರ್ಣ ಪಾತ್ರವಹಿಸಿದ್ದು, ದೇಶದ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡಿದೆ ಎಂದಿದ್ದಾರೆ. ಪ್ರಸಕ್ತ ಹಣಕಾಸು ವ?ದ ಏಪ್ರಿಲ್-ಜೂನ್ ತ್ರೈಮಾಸಿಕದಲ್ಲಿ ಭಾರತದ ಜಿಡಿಪಿ ಶೇಕಡಾ ೭.೮ ರ? ಬೆಳವಣಿಗೆ ಕಂಡಿದ್ದು, ಇದು ಐದು ತ್ರೈಮಾಸಿಕಗಳಲ್ಲಿ ಅತಿ ಹೆಚ್ಚಿನ್ನದ್ದಾಗಿದೆ.ಇಂದೋರ್‌ನ ರಂಗವಾಸ ಗ್ರಾಮದಲ್ಲಿ ಸರ್ಕಾರಿ ಬ್ಯಾಂಕುಗಳ ಹಣಕಾಸು ಸೇರ್ಪಡೆ ಅಭಿಯಾನ "ಸಂತೃಪ್ತಿ ಶಿಬಿರ್" ಅನ್ನು ಉದ್ದೇಶಿಸಿ ಮಾತನಾಡಿದ ಸಂಜಯ್ ಮಲ್ಹೋತ್ರಾ, ಕೇಂದ್ರ ಸರ್ಕಾರ ಮತ್ತು ಆರ್‌ಬಿಐ ೧೧ ವ?ಗಳ ಹಿಂದೆ ಬ್ಯಾಂಕುಗಳ ಸಹಯೋಗದೊಂದಿಗೆ ಜನ ಧನ ಯೋಜನೆಯನ್ನು ಪ್ರಾರಂಭಿಸಿವೆ, ಇದು ದೇಶಾದ್ಯಂತ ಅಭಿವೃದ್ಧಿಗೆ ಕಾರಣವಾಗಿದೆ ಎಂದು ಹೇಳಿದರು. ದೇಶದ ಬೆಳವಣಿಗೆಯ ಪಯಣದಲ್ಲಿ ಎಲ್ಲಾ ವರ್ಗಗಳ ಜನರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಈ ಯೋಜನೆಯಡಿಯಲ್ಲಿ ೫೫ ಕೋಟಿ ಖಾತೆಗಳನ್ನು ತೆರೆಯಲಾಗಿದೆ, ಅವರಿಗೆ ಉಳಿತಾಯ, ಪಿಂಚಣಿ, ವಿಮೆ, ಸಾಲ ಮತ್ತು ಇತರ ಸೇವೆಗಳನ್ನು ಒದಗಿಸಲಾಗಿದೆ ಎಂದು ಆರ್‌ಬಿಐ ಗವರ್ನರ್ ಹೇಳಿದ್ದಾರೆ.

><><><><><><><><><><

೨೦೨೫-೨೬ರ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಭಾರತವು ಶೇಕಡಾ ೭.೮ರಷ್ಟು ಆರ್ಥಿಕ ಬೆಳವಣಿಗೆ ದಾಖಲಿಸಿದ್ದು, ಇದು ನಿರೀಕ್ಷೆಗಿಂತ ಹೆಚ್ಚಿನ ಸಾಧನೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.  ದೇಶದ ಆರ್ಥಿಕ ಬೆಳವಣಿಗೆಯನ್ನು ವಿಶ್ಲೇಷಿಸುತ್ತಾ, ಆರ್ಥಿಕ ತಜ್ಞ ಪ್ರೊ. ಯಶವೀರ್ ತ್ಯಾಗಿ, ಭಾರತದ ಆರ್ಥಿಕತೆ ನಿರೀಕ್ಷೆಗಿಂತ ಹೆಚ್ಚಿನ ಬೆಳವಣಿಗೆ ದಾಖಲಿಸಿದ್ದು, ಇದು ಸದೃಢ ಅಭಿವೃದ್ಧಿಯ ಸಂಕೇತ ಎಂದು ಹೇಳಿದ್ದಾರೆ. ರಾಜ್ಕೋಟ್‌ನ ಸೌರಾಷ್ಟ್ರ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಸುರೇಶ್ ಜಿ. ಪರಡವಾ ಅವರು ಈ ಬೆಳವಣಿಗೆಯು ಉತ್ತಮ ಮಳೆಗಾಲದ ಕಾರಣ ಸಂಭವಿಸಿದ ಕೃಷಿ ಉತ್ಪಾದನೆಯ ಹೆಚ್ಚಳದಿಂದಾಗಿ ಸಾಧ್ಯವಾಯಿತು ಎಂದು ಅಭಿಪ್ರಾಯಪಟ್ಟಿದ್ದಾರೆ. ಹಿಂದಿನ ಆರ್ಥಿಕ ವರ್ಷದ ಅಂತಿಮ ತ್ರೈಮಾಸಿಕದಲ್ಲಿ ಭಾರತ ಶೇಕಡಾ ೭.೪ರಷ್ಟು ಬೆಳವಣಿಗೆ ದಾಖಲಿಸಿದ್ದರೆ, ಈ ವರ್ಷ ಮೊದಲ ತ್ರೈಮಾಸಿಕದಲ್ಲಿ ಅದು ೭.೮ರಷ್ಟಕ್ಕೆ ಏರಿಕೆಯಾಗಿದೆ.

><><><><><><><><><><

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಅಹಮದಾಬಾದ್‌ನಲ್ಲಿ ಎರಡು ಹೊಸ ನಗರ ಆರೋಗ್ಯ ಕೇಂದ್ರಗಳನ್ನು ಉದ್ಘಾಟಿಸಲಿದ್ದಾರೆ. ಎರಡು ದಿನಗಳ ಭೇಟಿಗಾಗಿ ಅವರು ನಿನ್ನೆ ಸಂಜೆ ಗುಜರಾತ್‌ಕ್ಕೆ ಆಗಮಿಸಿದರು. ಅವರು ನಗರದಾದ್ಯಂತ ಹಲವಾರು ನಗರ ಅರಣ್ಯೀಕರಣ ಅಭಿಯಾನಗಳಲ್ಲಿ ಭಾಗವಹಿಸಲಿದ್ದು, ಪರಿಸರ ಸಂರಕ್ಷಣೆಗೆ ಉತ್ತೇಜನ ನೀಡಲಿದ್ದಾರೆ. ಇಂದು ಉದ್ಘಾಟನೆಗೊಳ್ಳಲಿರುವ ನಗರ ಆರೋಗ್ಯ ಕೇಂದ್ರಗಳಲ್ಲೊಂದು ಗೊಟಾ ವಾರ್ಡಿನ ಓಗ್ನಜ್ ಗ್ರಾಮದ ಸಮೀಪದಲ್ಲಿದ್ದು, ಮತ್ತೊಂದು ಚಾಂಡ್ಲೋಡಿಯಾ ವಾರ್ಡಿನ ಓಸಿಯಾ ಹೈಪರ್ ಮಾರ್ಟ್ ಸಮೀಪದಲ್ಲಿದೆ. ಈ ಮೂಲಕ ಅಹಮದಾಬಾದ್ ಮಹಾನಗರ ಪಾಲಿಕೆಗೆ ಇನ್ನೆರಡು ನಗರ ಆರೋಗ್ಯ ಕೇಂದ್ರಗಳು ಸೇರ್ಪಡೆಯಾಗಲಿವೆ. ಅಹಮದಾಬಾದ್‌ನ ಆರೋಗ್ಯ ಮತ್ತು ಪರಿಸರ ಮೂಲಸೌಕರ್ಯ ಅಭಿವೃದ್ಧಿಗೆ ಈ ಯೋಜನೆಗಳು ಮಹತ್ವಪೂರ್ಣ ಬದಲಾವಣೆ ತರಲಿವೆ ಎಂದು ನಿರೀಕ್ಷಿಸಲಾಗಿದೆ.

><><><><><><><><><><

ಕೇಂದ್ರ ಸರ್ಕಾರ ಆದಿ ವಾಣಿಯ ಬೀಟಾ ಆವೃತ್ತಿಯನ್ನು ಬಿಡುಗಡೆ ಮಾಡಲು ಸಜ್ಜಾಗಿದ್ದು, ಇದು ಬುಡಕಟ್ಟು ಭಾ?ಗಳಿಗೆ ಭಾರತದ ಮೊದಲ ಎಐ ಚಾಲಿತ ಅನುವಾದಕವಾಗಿದೆ. ಬುಡಕಟ್ಟು ವ್ಯವಹಾರಗಳ ಸಚಿವಾಲಯ, ಈ ಅನುವಾದ ಸಾಧನವು ಸಮಗ್ರ ಬುಡಕಟ್ಟು ಸಬಲೀಕರಣ ಮತ್ತು ಭಾರತದ ಶ್ರೀಮಂತ ಭಾ? ವೈವಿಧ್ಯತೆಯ ಸಂರಕ್ಷಣೆಯತ್ತ ಒಂದು ಹೆಜ್ಜೆಯಾಗಿದೆ ಎಂದು ತಿಳಿಸಿದೆ. ಬುಡಕಟ್ಟು ಮತ್ತು ಬುಡಕಟ್ಟು ಅಲ್ಲದ ಸಮುದಾಯಗಳ ನಡುವಿನ ಸಂವಹನದ ಅಂತರವನ್ನು ಕಡಿಮೆ ಮಾಡಲು ಆದಿ ವಾಣಿಯನ್ನು ಜನಜಾತಿಯ ಗೌರವ್ ವ? ಅಡಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಯೋಜನೆಯು ಭಾರತದಾದ್ಯಂತ ಬುಡಕಟ್ಟು ಸಂಸ್ಕೃತಿಯನ್ನು ರಕ್ಷಿಸಲು ಮತ್ತು ಉತ್ತೇಜಿಸಲು ಸುಧಾರಿತ ಎಐ ತಂತ್ರಜ್ಞಾನಗಳನ್ನು ಸಂಯೋಜಿಸುತ್ತದೆ ಹಾಗೂ ಭಾರತದ ಸಾಂಸ್ಕೃತಿಕ ವೈವಿಧ್ಯತೆಯ ಸಾಂವಿಧಾನಿಕ ಮೌಲ್ಯಗಳನ್ನು ಬಲಪಡಿಸುತ್ತದೆ, ಅಳಿವಿನಂಚಿನಲ್ಲಿರುವ ಭಾ?ಗಳ ಎಐ -ಚಾಲಿತ ಸಂರಕ್ಷಣೆಯಲ್ಲಿ ರಾ?ವನ್ನು ಜಾಗತಿಕ ನಾಯಕನನ್ನಾಗಿ ಮಾಡುವ ನಿಟ್ಟಿನಲ್ಲಿ ಇದು ಪ್ರಮುಖ ಹೆಜ್ಜೆಗಿದೆ.

><><><><><><><><><

ಕಜಕಿಸ್ತಾನದ ಶೈಮ್‌ಕೆಂಟ್‌ನಲ್ಲಿ ನಡೆಯುತ್ತಿರುವ ೧೬ನೇ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಇತಿಹಾಸ ನಿರ್ಮಿಸಿದೆ. ಪಂದ್ಯಾವಳಿಯ ಇತಿಹಾಸದಲ್ಲಿಯೇ ಇದೇ ಮೊದಲ ಬಾರಿಗೆ ಭಾರತ ೫೦ ಚಿನ್ನದ ಪದಕಗಳೊಂದಿಗೆ ಪದಕ ಪಟ್ಟಿಯಲ್ಲಿ ಮುಂಚೂಣಿಯಲ್ಲಿದೆ. ಭಾರತ ಒಟ್ಟು ೯೯ ಪದಕಗಳನ್ನು ಗಳಿಸಿದ್ದು, ಇದರಲ್ಲಿ ೨೬ ಬೆಳ್ಳಿ ಮತ್ತು ೨೩ ಕಂಚು ಪದಕಗಳು ಸೇರಿವೆ. ಆತಿಥೇಯ ಕಜಕಿಸ್ತಾನ್ ದ್ವಿತೀಯ ಸ್ಥಾನದಲ್ಲಿದ್ದು, ಚೀನಾ ಮೂರನೇ ಸ್ಥಾನದಲ್ಲಿದೆ.

><><><><><><><><><